# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

## ಸಿ.ಸಿ. ನಂ. **19/2018**

ಸಿ.ಡಬ್ಲೂ-**5** ಪಿ.ಡಬ್ಲೂ **-4**

ದಿಃ **23.11.2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಕಿರಣ |
| ಗಂಡ/ತಂದೆಯ ಹೆಸರು | ಮಲ್ಲೇಶ |
| ವಯಸ್ಸು | ಸುಮಾರು 23 ವರ್ಷ |
| ಕೆಲಸ | ವ್ಯವಸಾಯ |
| ವಾಸಸ್ಥಳ | ಮೈಲಾಂಬೂರು ಗ್ರಾಮ |

(1 ರಿಂದ 5ನೇ ಆರೋಪಿತರು ಗೈರುಹಾಜರಿದ್ದು, ಅವರ ಗುರುತನ್ನು ತಕರಾರು ಮಾಡುವುದಿಲ್ಲ ಎಂಬ ಷರತ್ತಿಗೆ ಒಳಪಟ್ಟಂತೆ ಸಾಕ್ಷ್ಯ ತೆಗೆದುಕೊಳ್ಳಲಾಯಿತು).

<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ-1 ನನ್ನ ತಾಯಿ. ಚಾಸಾ-2 ನನ್ನ ತಂದೆ. ಚಾಸಾ-3 ಮತ್ತು 4 ನನ್ನ ಅಜ್ಜಿಯಂದಿರು. ಚಾಸಾ-6 ರಿಂದ 9 ರವರು ನಮ್ಮ ಊರಿನವರು. ಆರೋಪಿತರು ಗೊತ್ತು, ನಮ್ಮ ಮನೆಯ ಪಕ್ಕದವರು.

ದಿಃ08.11.2017 ರಂದು ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ನಾನು, ಚಾಸಾ-1 ರಿಂದ 4 ರವರು ನಮ್ಮ ಮನೆಯ ಬಳಿ ಇದ್ದಾಗ, 1ನೇ ಆರೋಪಿ ಬೊಳಿ ಮಕ್ಕಳಾ, ಸೂಳೆ ಮಕ್ಕಳಾ, ನಮ್ಮ ಜಾಗದಲ್ಲಿ ಮನೆ ಕಟ್ಟಿದ್ದೀರಾ ಎಂದು ಬೈಯುತ್ತಿದ್ದರು. ಆಗ ಚಾಸಾ-2 ರವರು ಆರೋಪಿತರನ್ನು 60 ವರ್ಷಗಳಿಂದ ಮನೆ ಕಟ್ಟಿರುವುದು ಈಗ ಕೇಳುತ್ತಿದ್ದೀರಾ ಎಂದು ಕೇಳಿದ್ದಕ್ಕೆ, 1ನೇ ಆರೋಪಿ ಚಾಸಾ-2 ರವರನ್ನು ಕೆಳಗೆ ಕೆಡವಿದರು. 2 ರಿಂದ 4ನೇ ಆರೋಪಿತರು ಕಾಲಿನಿಂದ ತುಳಿದರು. ಆಗ ಚಾಸಾ-3 ರವರು

ಬಿಡಿಸಲು ಮುಂದಾದಾಗ 1ನೇ ಆರೋಪಿ ದೊಣ್ಣೆಯಿಂದ ಬಲ ಬುಜಕ್ಕೆ ಹಾಗೂ ಬಲ ಸೊಂಟಕ್ಕೆ ಹಲ್ಲೆ ಮಾಡಿರುತ್ತಾರೆ. ಚಾಸಾ-4 ರವರು ಬಿಡಿಸಲು ಬಂದಾಗ, 1ನೇ ಆರೋಪಿ ಚಾಸಾ-4 ರವರಿಗೆ ಎಡತೊಡೆ, ಎಡಹೆಬ್ಬರಳು ಹಾಗೂ ಎಡಭಾಗದ ಎದೆಗೆ ಹೊಡೆದಿರುತ್ತಾನೆ. ಚಾಸಾ-1 ರವರು ಜಗಳ ಬಿಡಿಸಲು ಮುಂದಾದಾಗ 5ನೇ ಆರೋಪಿ ಚಾಸಾ-1 ರವರು ಜುಟ್ಟು ಹಿಡಿದು ಎಳೆದಾಡಿ, ಬಿಳಿಸಿರುತ್ತಾರೆ. ಆಗ ನಾನು ಬಿಡಿಸಲು ಮುಂದಾದಾಗ 2ನೇ ಆರೋಪಿ ದೊಣ್ಣೆಯಿಂದ ನನ್ನ ಬಲಹೆಬ್ಬರಳಿಗೆ ಹೊಡೆದಿರುತ್ತಾರೆ. ಗ್ರಾಮಸ್ತರೆಲ್ಲರೂ ಸೇರಿ ನಮ್ಮನ್ನು ಆಸ್ಪತ್ರೆಗೆ ಕಳುಹಿಸಿರುತ್ತಾರೆ. 1ನೇ ಆರೋಪಿ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾನೆ. ನ್ಯಾಯಾಲಯದ ಮುಂದಿರುವ ಮು.ಮಾ-1 ಮತ್ತು 2 ರಿಂದಲೇ ಆರೋಪಿತರು ನಮ್ಮಗಳ ಮೇಲೆ ಹಲ್ಲೆ ಮಾಡಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಪೊಲೀಸರ ಸಮಕ್ಷಮ ಮೇಲೆ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷಿಯಾಗಿರುವುದರಿಂದ ಸ. ಸ. ಅ ರವರ ಪಾಟೀಸವಾಲಿಗಾಗಿ ಅನುಮತಿಯನ್ನು ಕೋರಿದ್ದು, ಆಲಿಸಿ ಅನುಮತಿಸಲಾಯಿತು.)

ಪಾಟೀಸವಾಲು ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1 ರಿಂದ 5ನೇ ಆರೋಪಿತರು ಎಲ್ಲರೂ ಸೇರಿ ನಿಮ್ಮಗಳನ್ನು ಸೂಳೆ ಮಕ್ಕಳಾ, ಬೊಳಿಮಕ್ಕಳಾ ಎಂದು ಅವಾಚ್ಯವಾಗಿ ನಿಂದಿಸಿರುತ್ತಾರೆಂದರೆ ಸರಿ. 2ನೇ ಆರೋಪಿ ಕಾಲಿನಿಂದ ಚಾಸಾ-2 ರವರ ತುಟಿಯ ಬಳಿ ಒದ್ದಿರುತ್ತಾನೆ ಎಂದರೆ ಸರಿ. ಆರೋಪಿತರೆಲ್ಲರೂ ಸೇರಿ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆಂದರೆ ಸರಿ. ಚಾಸಾ-3 ಈಗ ಮೃತಪಟ್ಟಿರುತ್ತಾರೆ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರು ಶ್ರೀ ಎಸ್.ಪಿ. ವಕೀಲರಿಂದಃ</u>

ನೀವು ವಾಸ ಇರುವ ಮನೆಯಲ್ಲಿ ಅಳತೆಗಾಗಿ ಕಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. 1ನೇ ಆರೋಪಿ ಮನೆಯವರು ಅಳತೆಗಾಗಿ ಕಟ್ಟಿದ್ದೀರಾ ಎಂದರೆ ಸಾಕ್ಷಿ ಅವರು ಕಟ್ಟಿದ್ದರು ಎಂದು ಹೇಳುತ್ತಾರೆ. ಅಳತೆ ಕಾರ್ಯ ಮಾಡುವ ಕಾಲಕ್ಕೆ ಸುಮಾರು ಎಷ್ಟು ಅಡಿ ಒತ್ತುವರಿ ಮಾಡಿದೆ ಎಂದು ಬಂದಿತ್ತು ಎಂದರೆ ಸಾಕ್ಷಿ 10 ಅಡಿ ಎಂದು ಹೇಳುತ್ತಾರೆ. ಅಳತೆ ಕಾರ್ಯ ಮಾಡಲು ಬಂದವರು ಅಳತೆಯಾದ ಮೇಲೆ ಕಲ್ಲು ನೆಟ್ಟಿ ಹೋಗಿದ್ದರು ಎಂದರೆ ಸರಿ. ಅಳತೆ ಕಾರ್ಯ ಸರಿಯಾಗಿಲ್ಲ ಎಂದು ನಿಮ್ಮ ಮನೆಯವರು ತಕರಾರನ್ನಾಗಲೀ, ಮೇಲ್ಮನವಿಯಾಗಲೀ ಸಲ್ಲಿಸಿಲ್ಲ ಎಂದರೆ ಸರಿ. ಅಳತೆಯಾದ ಎಷ್ಟು ದಿನಗಳ ನಂತರ ಚಾಸಾ-1 ರವರು ದೂರು ಸಲ್ಲಿಸಿರುತ್ತಾರೆಂದರೆ ಸಾಕ್ಷಿ ಹೊಡೆದಾಟವಾದ ನಂತರ ದೂರು ನೀಡಿರುತ್ತೇವೆ ಎಂದು ಹೇಳುತ್ತಾರೆ. ಹೊಡೆದಾಟ ಸುಮಾರು ಅರ್ಧ ಗಂಟೆಗಳ ಕಾಲ ನಡೆದಿರುತ್ತದೆ.

1ನೇ ಆರೋಪಿ ಚಾಸಾ-2 ರವರನ್ನು ಬೈಯುತ್ತಿದ್ದರು ಎಂದು ನಿಮ್ಮ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಚಾಸಾ-2 ರವರು 60-70 ವರ್ಷಗಳಿಂದ ಮನೆಕಟ್ಟಿರುವುದಾಗಿ ಹೇಳಿದರು ಎಂದು ನಿಮ್ಮ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಚಾಸಾ-2 ರವರಿಗೆ ಕೊಲೆ ಬೆದರಿಕೆ ಹಾಕಿದರು ಎಂದು ಇಂದೇ ಮೊದಲ ಬಾರಿಗೆ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. 1ನೇ ಆರೋಪಿ ಚಾಸಾ-2 ರವರನ್ನು ಹೊಡೆದಿಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿ ಚಾಸಾ-2 ರವರಿಗೆ ಕೈಗಳಿಂದ, ಕಾಲಿನಿಂದ ಒದ್ದರು ಎಂದು ನ್ಯಾಯಾಲಯದ ಮುಂದೆ ಹೇಳಿದ್ದು, ಆ ಸಮಯದಲ್ಲಿ ನೀವು, ಚಾಸಾ-3 ಮತ್ತು 4 ಎಲ್ಲಿ ಇದ್ದೀರಿ ಎಂದರೆ ಸಾಕ್ಷಿ ಮನೆಯ ಒಳಗಡೆಯಿಂದ ಬಂದೆವು ಎಂದು ಹೇಳುತ್ತಾರೆ. ನೀವು ಮನೆಯಿಂದ ಹೊರ ಭಾಗಕ್ಕೆ ಬಂದಾಗ, 1 ಮತ್ತು 2ನೇ ಆರೋಪಿತರು ಕೈಗಳಿಂದ ಹೊಡೆಯುತ್ತಿದ್ದರಾ ಎಂದರೆ ಸಾಕ್ಷಿ

ಕಾಲುಗಳಿಂದ ಹಲ್ಲೆ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಆರೋಪಿತರು ಚಾಸಾ-2 ರವರಿಗೆ ಕಾಲಿನಿಂದ ಒದ್ದು ಹಲ್ಲೆ ಮಾಡಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಚಾಸಾ-3 ಮತ್ತು 4 ರವರು ಬಿಡಿಸಲು ಬಂದಾಗ ಆರೋಪಿತರು ಮು.ಮಾ-1 ಮತ್ತು 2 ರಿಂದ ಹೊಡೆದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. 5ನೇ ಆರೋಪಿ ಚಾಸಾ-1 ರವರ ಜುಟ್ಟು ಹಿಡಿದುಕೊಂಡು ಎಳೆದಾಡಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಆಸ್ಪತ್ರೆಗೆ ಎಷ್ಟು ಗಂಟೆಗೆ ಬಂದಿರಿ ಎಂದರೆ ಸಾಕ್ಷಿ ಸಮಯ ಗೊತ್ತಿಲ್ಲ, ಜಗಳವಾದ ಮೇಲೆ ಬಂದೆವು ಎಂದು ಹೇಳುತ್ತಾರೆ.

ನಾನು ದ್ವಿತಿಯ ಪಿ.ಯು.ಸಿ ವರೆಗೆ ಓದಿರುತ್ತೇನೆ. ನಿಮಗೆ ಸಮಯ ನೋಡಲು ಬರುತ್ತದೆಂದರೆ ಸರಿ. ಊರಿನಿಂದ ಎಷ್ಟು ಗಂಟೆಗೆ ಬಿಟ್ಟು, ಆಸ್ಪತ್ರೆಗೆ ಎಷ್ಟು ಗಂಟೆಗೆ ಬಂದಿರಿ ಎಂದರೆ ಸಾಕ್ಷಿ ಗಲಾಟೆಯ ಗಾಬರಿಯಲ್ಲಿ ಸಮಯ ನೋಡಲಿಲ್ಲ ಎಂದು ಹೇಳುತ್ತಾರೆ. ಆಸ್ಪತ್ರೆಯಲ್ಲಿ ನೀವು ಎಷ್ಟು ಸಮಯದವರೆಗೆ ಇದ್ದಿರಿ ಎಂದರೆ ಸಾಕ್ಷಿ 1ಗಂಟೆಯ ಕಾಲ ಇದ್ದೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಮತ್ತೆ ಸಂಜೆ ವಾಪಸ್ಸು ಆಸ್ಪತ್ರೆಗೆ ಬಂದಿರುತ್ತೇನೆ. ಸಂಜೆ ಸಮಯದಲ್ಲಿ ನೀವು ಆಸ್ಪತ್ರೆಗೆ ಬಂದಾಗ ಚಾಸಾ-2 ರವರು ದೂರು ನೀಡಿದ ಬಗ್ಗೆ ವಿಚಾರ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನೀವು ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆ ನೋಡಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಹುಣಸೂರು ಸರ್ಕಾರಿ ಆಸ್ಪತ್ರೆಯಿಂದ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆ ಸುಮಾರು ಅರ್ಧ ಕಿ.ಮೀ ದೂರ ಇದೆ ಎಂದರೆ ಸರಿ. ಘಟನೆ ನಡೆಯಿತು ಎಂದು ಹೇಳುವ ದಿನದಂದಾಗಲೀ ಅಥವಾ ಸಂಜೆಯಾಗಲೀ ದೂರು ನೀಡಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಚಾಸಾ-1 ಮತ್ತು 2 ರವರನ್ನು ಮನೆಯಲ್ಲಿ ನೋಡಿಕೊಳ್ಳಲು ಯಾರು ಇಲ್ಲದೇ ಇದ್ದುದ್ದರಿಂದ, ವಾಪಸ್ಸು ಮನೆಗೆ ಹೋದೆ ಎಂದು ಹೇಳುತ್ತಾರೆ.

ಪೊಲೀಸರು ಹೇಳಿಕೆಯನ್ನು ಯಾವತ್ತು ತೆಗೆದುಕೊಂಡರು ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ ಎಂದು ಹೇಳುತ್ತಾರೆ. ನೀವು ಈ ದಿನ ಹೇಳಿದಂತೆ ಯಾವುದೇ ಘಟನೆ ನಡೆಯದೇ ಇದ್ದುದ್ದರಿಂದ, ಘಟನೆ ನಡೆಯಿತು ಎಂದು ಹೇಳುವ ದಿನದಂದೇ ನೀವು ಮತ್ತು ನಿಮ್ಮ ಮನೆಯವರು ದೂರು ನೀಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೇ ಇರುವುದರಿಂದ, ಗಲಾಟೆಯಾದ ಸಮಯವನ್ನು ಹಾಗೂ ಆಸ್ಪತ್ರೆಗೆ ಎಷ್ಟು ಗಂಟೆಗೆ ಹೋದಿರಿ ಎಂದು ನಿಮಗೆ ಹೇಳಲಾಗುತ್ತಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರಿಂದ 4 ರವರು ಜಮೀನಿಗೆ ಎತ್ತಿನ ಗಾಡಿಯಲ್ಲಿ ಹೋಗುವಾಗ ಬಿದ್ದು ಗಾಯಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಗಾಯ ಮಾಡಿಕೊಂಡಿದ್ದನ್ನು ದುರುಪಯೋಗಪಡಿಸಿಕೊಂಡು, ನಿಮಗೂ ಹಾಗೂ ಆರೋಪಿತರ ನಡುವೆ ಇದ್ದ ಜಾಗದ ವಿಷಯದ ತಕರಾರು ಇದ್ದ ಸಂಬಂಧ ಸುಳ್ಳು ದೂರನ್ನು ದಾಖಲಿಸಿರುತ್ತೀರಾ ಎಂದರೆ ಸರಿಯಲ್ಲ. ಮು.ಮಾ-1 ಮತ್ತು 2 ರಿಂದ ಆರೋಪಿತರು ಚಾಸಾ-3 ಮತ್ತು 4 ರವರಿಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.